ಈ ವಯಸ್ಸಲ್ಲೇ ಡೀಪ್ ಆಗಿ ಭಾಷಣ ಬಿಗಿತಾಳೆ... ಅಪ್ಪನ ಮೇಲಿನ ರೇಜಲ್ಲಿ ಅವರಪ್ಪನ ಎಸೆನ್ಸ್ ಅನ್ನೇ ಅಮ್ಮನ ಕರಿಯರ್‌ರ್ರಿಗೆ ಯೂಸ್ ಮಾಡ್ತಾ ಇದ್ದಾಳೆ...'

'ಮುಂದೆ ಅವ್ಳು ಲೀಡರ್ ಆಗ್ತಾಳೆ ಅನ್ಸುತ್ತೆ... ಆದ್ರೆ ನೀನ್ ಏನ್ ಮಾರಾಯ ಆ ಸ್ಕೀನ್ ರೈಟರ್ ಮಗಳ್ ಬಗ್ಗೇನೂ ಇಷ್ಟೆಲ್ಲ ತಿಳ್ಕೊಂಡಿದ್ಯಾ...'

'ಅದೇ ...ಇನ್ನೊಂದು ಹತ್ತು ವರ್ಷದಲ್ಲಿ ನನ್ನ ಮಗಳಿಗೂ ಅವಳಷ್ಟು ವಯಸ್ಸು ಆಗಿರುತ್ತಲ್ವಾ...'

'ವಾಟ್ ದ ಫಕ್.....' ಎನ್ನಲು ಹೋದ ವಿಕಾಸ ಕಡೆಯ ಪೆಗ್ಗಿನ ಅಷ್ಟೂ ಹೆಂಡ, ಬಾಯಿಂದ ಗಂಟಲಿಗೆ ಇಳಿಯುತ್ತಿರುವುದನ್ನೇ ಮರೆತು ಆ ಮಾತು ಸರಿಯಾಗಿ ಆಡಲು ಆಗದೇ ಎಲ್ಲವನ್ನೂ ಆಚೆಗೆ ಉಗಿಳಿದ. ಲಾನಿನ ಹಸಿರಿನ ಮೇಲೆ ಬಿದ್ದುಕೊಂಡು ಇವರ ಮಾತು ಕೇಳುತ್ತಾ ಇದ್ದ ಕಜ್ಜಿನಾಯಿ ನಿಧಾನಕ್ಕೆ ತೆವಳಿ, ಗ್ರಾನೈಟಿನ ಮೇಲೆ ಈತ ಉಗಿದ ಸ್ನಾಚನ್ನು ನಿಧಾನವಾಗಿ ನೆಕ್ಕಿತು. ಮ್ಯಾಕ್ಸ್ ಕಣ್ಣುಗಳು ಕೆಂಪಗೆ ವಿಕಾಸನನ್ನು ದಿಟ್ಟಿಸಿದವು. ಒಂದು ಅಲೌಕಿಕ ಭಯ ವಿಕಾಸನನ್ನು ಆವರಿಸಿತು.

'ಏನ್ ಹೇಳ್ತಾ ಇದ್ಯೋ ಮ್ಯಾಕ್ಸಿ... ನಿನ್ಗೆ ಯಾವಾಗ್ಲೋ ಮಗ್ಳು ಹುಟ್ಟಿದ್ಲೂ....?'

'ಅದೇ ... ಅವ್ಳೊಬ್ಳು ಇದ್ಲಲ್ಲ...'

'ಯಾರೂ ಆ ಡಯಟೀಶಿಯನ್ನಾ...? ಮದ್ವೆ ಆಗಿತ್ತಲ್ವ ಅವ್ಳಗೇ...?'

'ಹ್ಞೂ... ಅದೇ ಅವಳದ್ದೂ ಲವ್ ಮ್ಯಾರೇಜ್, ಕೋವಿಡ್ ಆದ್ಮೇಲ್ ವ್ಯಾಕ್ಸಿನೇಷನ್ನ್ ಏನೋ ತಗೊಂಡು ಅವ್ಳ ಗಂಡಂಗೆ ಕಾಲ್ ನೋವು ಏನೋ ಶುರು ಆಗಿತ್ತಂತೆ... ಮತ್ತೆ ದೊಡ್ಡ ಎಡಬಿಡಂಗಿ ಬೇರೆ ಅಂತೆ... ಒಟ್ನಲ್ಲಿ ಅವ್ಳ ಗಂಡಾ ಅಂದ್ರೇನೇ ಆಗ್ತಾ ಇರ್ಲಿಲ್ಲ ಆಗ ಅವಳಿಗೆ. ಆಗ್ಲೇ ನಂದೂ ಅವ್ಳದ್ದೂ ಶುರು ಆಗಿದ್ದು... ನಾನು ಬರೀ ಇದು ಅಫೇರ್ ಅಂತ ಹಂಗೇ ಮೂವ್ ಮಾಡ್ತಾ ಇದ್ದೆ... ಒಂಥರ ಕ್ಲೋಸ್ ಆದ್ವಿ... ನಂದೂ ಅವ್ಳ ಗಂಡಂದೂ ಬ್ಲಡ್ ಗ್ರೂಪ್ ಒಂದೇ....

'ಅದಕ್ಕೇ....?'

'ಅದಕ್ಕೇ ನಂಗೇ ನಿನ್ನ್ ಮಗು ಬೇಕು ಅಂದ್ಲು... ಸರಿ ಅಂದೆ. ಕೊನೆಗೇ ಅವ್ಳು ಪ್ರೆಗ್ನೆಂಟ್ ಆದ್ಲೂ. ನಾವಿಬ್ರೂ ಒಟ್ಟಿಗೆ ಇರೋಣ್ವ ಅನ್ನೋಣ ಅಂತಾ ಇದ್ದೆ. ಬಟ್ ಎಲ್ಲಿ, ಅವ್ಳ ಲೈಫ್‌ಸ್ಟೈಲ್ ಎಷ್ಟ್ ಲಗ್ಷೂರಿಯಸ್ಸಾಗಿದೆ. ಅವ್ಳ ಮನೆಯಲ್ಲೇ ನಾವ್ ಮೀಟ್ ಆಗ್ತಾ ಇದ್ವಿ; ಆಗಾಗ ಅವ್ಳ ಗಂಡ ಬ್ಯುಸಿನೆಸ್ ಟ್ರಿಪ್ ಹೋಗ್ತಾ ಇದ್ದ; ಮೂರು-ಮೂರ್ ಬಣ್ಣದ ಸೋಪುಗಳಿದ್ವು ಮಾರಾಯ ಅವ್ಳ ಬಾತ್ ರೂಮಲ್ಲಿ...ಒಂದ್ಸಲ್ಲ ಮುಖ ತೊಳೆದ್ರೆ ಸಾಕು ಇಡೀ ಮುಖ ಒಳ್ಳೆ ಗುಲಾಬಿ ತೋಟದ ಹಾಗೇ ಘಮಘಮ ಅನ್ನೋದು... ನಾನಿಲ್ಲಿ ದಿನಕ್ಕ್ ಐದ್ ಕಂಪ್ಯೂಟರ್ ಸರ್ವೀಸ್ ಮಾಡಿದ್ರೆ ಅಥವಾ ದುಬೈ ಫೋನ್ಸ್ ಮಾರಿದ್ರೆ ಆ ಥರದ್ ಒಂದ್ ಸೋಪ್ ಪರ್ಚೇಸ್ ಮಾಡಕ್ಕೆ ದುಡ್ಡು ಆಗೋದು ಅನ್ಸುತ್ತೆ. ಇನ್ನು ಹುಟ್ಟೋ ಮಗೂನ ಎಲ್ಲಿಂದ ನೋಡ್ಕೊಳ್ಳಿ...? ಮತ್ತೆ ಅವ್ಳಿಗೂ ಹಾಗೇ ನನ್ನ ಜತೆ ಸೆಟ್ಲ್ ಆಗೋ ಪ್ಲಾನ್ ಏನೂ ಇರ್ಲಿಲ್ಲ ಬಿಡು...'

'ಆಮೇಲೆ...?'

'ಆಮೇಲೇನಿಲ್ಲ... ಹೆಣ್ಣು ಮಗು ಹುಟ್ತು. ಈಗ ನಾಲ್ಕು ವರ್ಷ. ಅವ್ಳು ಕಂಪ್ಲೀಟ್ ಆಗಿ ನನ್ನ ಡಿಸ್ಕನೆಕ್ಟ್ ಮಾಡಿದ್ದಾಳೆ. ಗಂಡನ ಜತೆ ಚೆನ್ನಾಗಿದ್ದಾಳೆ. ಮತ್ತೆ ಫೇಮಸ್ ಡಯಟೀಷನ್ನ್ ಬೇರೆ. ಎಷ್ಟೋ ಮಿಲಿಯನ್ಸ್ ಫಾಲೋವರ್ಸ್ ಇದ್ದಾರೆ ಅವ್ಳಿಗೆ. ಆಗಾಗ ಆ ರವಿಚಂದ್ರ ಗುರೂಜಿ ಬಾಲಸೂರ್ಯವಿಹಾರ ಇದ್ಯಲ್ಲ ಅಲ್ಲಿಗೆ ಹೋಗಿ ಸುಮ್ನೆ ಗೇಟ್ ಹತ್ರ ನಿಂತು ನನ್ನ್ ಮಗಳನ್ನ ನೋಡ್ಕಂಡು ಬರ್ತಾ ಇದ್ದೀನಿ....'

'.....'

'ಅವ್ಳ ಹೆಸ್ರು ಹೇಳಿಲ್ಲ ಮಾರಾಯ ನನಗೆ.... ಈ ಸಲ ಅವ್ಳಿಗೆ ಐದು ವರುಷ ಆದಾಗಲಾದ್ರೂ ಈ ಬೀಚ್ ಹೌಸಲ್ಲಿ ನಾವ್ ಮೂರು ಜನ ಸೆಲಿಬ್ರೇಟ್ ಮಾಡೋಣ ಅಂತ ಪ್ಲಾನ್ ಮಾಡಿದ್ದೆ. ಬಟ್ ಅವ್ಳಮ್ಮ ನನ್ನ ಕಾಂಟ್ಯಾಕ್ಟಿಗೆ ಸಿಕ್ಲಿಲ್ಲ....'

'ಬಿಡು ವರ್ಕ್ ಆಗ್ತಾ ಇರಲಿಲ್ಲ ಅದೆಲ್ಲ... ಆ ಹೆಂಗ್ಸು ಒಂಥರಾ ಮೆಂಟಲ್ಲು ನಿನ್ನ ಇನ್ನೂ ಮೆಂಟಲ್ ಮಾಡ್ ಬಿಡ್ತಾ ಇದ್ಲು...'

'ಅದೇ...ಅದೇ'

'ಆದ್ರೂ ನಾಟ್ ಬ್ಯಾಡ್ ಮಾರಯಾ! ನಿನ್ಗೇನ್ ಮಿಶಿನ್ನಿಗೆ ಕಮ್ಯೂನಿಸ್ಟ್ ಬಲ್ಗೆ ಹೋಗೋ ಕಥೆ ಬರ್ಲಿಲ್ಲ...ಪಾಶ್ ನೀನು...'

'ಅಲ್ವಾ... ಎಂಟ್ನೇ ಕ್ಲಾಸಲ್ಲಿ ವಿಸಿಪಿ ಕನೆಕ್ಟ್ ಮಾಡಿ ಕ್ಯಾಸೆಟ್ಟ್ ಹಾಕ್ಕೊಂಡ್ ನಮ್ಮನೆ ಅಟ್ಟದ ಮೇಲೆ ನಾವಿಬ್ರೂ ತ್ರಿಬಲ್ ಎಕ್ಸ್ ನೋಡ್ತಾ ಇದ್ದಾಗ ಈ ಥರ ಚಟುವಟಿಕೆ ನಮ್ಮಂತಹ ಹುಲುಕೂಸುಗಳಿಗೆ ಸಾಧ್ಯನ